# 4. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭದ್ರಾಪುರ, ಶಿವಮೊಗ್ಗ ತಾ.





## ನಮ್ಮೂರ ಸುಂದರ ಶಾಲೆ :–

**"ಕಲಿಯುವ ನಿನ್ನ ಆಸಕ್ತಿ ಅದುವೇ ಶಿಕ್ಷಣದ ಶಕ್ತಿ" "ಶಿಕ್ಷಣವೊಂದು ಅರ್ಥ ಕಳೆದುಕೊಂಡರೆ ವ್ಯರ್ಥ"**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭದ್ರಾಪುರ, ಕೂಡ್ಲಿ ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ 577227 ಈ ಶಾಲೆಯು ಶಿವಮೊಗ್ಗ ತಾಲ್ಲೂಕು ಕೇಂದ್ರಸ್ಥಾನದಿಂದ 15 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ತುಂಗಾ ಮತ್ತು ಭಧ್ರಾ ನದಿಗಳ ನಡುವಿನ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಸುಮಾರು 300 ಮನೆಗಳಿದ್ದು ಅಂದಾಜು 1500 ಜನಸಂಖ್ಯೆಯು ಇದೆ. ಈ ಗ್ರಾಮದ ಪ್ರಥಮ ಸರ್ಕಾರಿ ಶಾಲೆಯಾದ ಇದು 1953 ರಲ್ಲಿ ಒಂದರಿಂದ ನಾಲ್ಕನೇ ತರಗತಿ ಕಿರಿಯ ಪ್ರಾಥಮಿಕ ಶಾಲೆಯಾಗಿ ಪ್ರಾರಂಭಗೊಂಡು 2003–04ನೇ ಸಾಲಿನಲ್ಲಿ 6–8ನೇ ತರಗತಿಯವರೆಗಿನ ಉನ್ನತೀಕರಿಸಿದ ಶಾಲೆಯಾಗಿ ಮಾರ್ಪಟ್ಟಿದೆ.

ಶಾಲಾದಾಖಲಾತಿ:– ಶಾಲೆಯಲ್ಲಿ ಉತ್ತಮ ಕಲಿಕಾ ವಾತಾವರಣ ಹಾಗೂ ಉತ್ತಮ ಭೌತಿಕ ಸೌಲಭ್ಯ, ಪೋಷಕರ ಸಹಕಾರದೊಂದಿಗೆ ಪ್ರತಿ ವರ್ಷವೂ ಸಹ ಶಾಲಾದಾಖಲಾತಿಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ.

* **2015–16** ನೇ ಸಾಲಿನಲ್ಲಿ ಶಾಲಾದಾಖಲಾತಿ **103**, * **2017–18** ನೇ ಸಾಲಿನಲ್ಲಿ ಶಾಲಾದಾಖಲಾತಿ **106**
* **2018–19** ನೇ ಸಾಲಿನಲ್ಲಿ ಶಾಲಾದಾಖಲಾತಿ **115**, * 2019–20 ನೇ ಸಾಲಿನಲ್ಲಿ ಶಾಲಾದಾಖಲಾತಿ 105

ಈ ರೀತಿ ಶಾಲಾದಾಖಲಾತಿ ಏರಿಕೆಗೆ ಶಾಲೆಯ ಮುಖ್ಯಶಿಕ್ಷಕರ, ಸಹಶಿಕ್ಷಕರ, ಎಸ್‌ಡಿಎಂಸಿ ಸದಸ್ಯರ, ಗ್ರಾ.ಪಂ. ಸದಸ್ಯರ ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಶಾಲೆಯು ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ.

ಮ್ಯಾಕ್ರೋ ಅಧ್ಯಯನ:– ನಮ್ಮ ಶಾಲೆಗೆ ದಿನಾಂಕ:06.03.2018 ರಂದು ಶ್ರೀ.ರಾಜೇಶ್, ಸಿಆರ್‌ಪಿ, ಬಿ.ಹೆಚ್.ರಸ್ತೆ ಇವರು ಶಾಲೆಗೆ ಭೇಟಿ ನೀಡಿ ನಲಿಕಲಿ ಘಟಕ 1 ಮತ್ತು 2 ಅನ್ನು ವೀಕ್ಷಣೆ ಮಾಡಲಾಗಿ ಮಕ್ಕಳ ಕಲಿಕೆಯು 'ಎ+' ಶ್ರೇಣಿಯಲ್ಲಿದ್ದು ಉತ್ತಮ ಪ್ರಗತಿಯು ಕಂಡುಬಂದಿರುವುದಾಗಿ ಆದರೆ ಘಟಕ–2 ರಲ್ಲಿ ಘಟಕ–1 ರಂತೆ ಭೌತಿಕ, ಕಲಿಕೋಪಕರಣಗಳನ್ನು ನಿರ್ವಹಿಸಲು ತಿಳಿಸಿರುತ್ತಾರೆ. ಅದರಂತೆ ಶಿಕ್ಷಕರು ಕಾರ್ಯನು ಪಾಲನೆಯನ್ನು ಮಾಡಿರುತ್ತಾರೆ.

1. ವಾಲ್‌ಸ್ಲೇಟ್:– ಎಲ್ಲಾ ಮಕ್ಕಳಿಗೂ ವಾಲ್‌ಸ್ಲೇಟ್‌ನಲ್ಲಿ ಹೆಸರು ಬರೆದು ಸೂಕ್ತಸ್ಥಳ ನಿಗದಿಪಡಿಸಲಾಗಿದ್ದು
ಮಕ್ಕಳು ಸಮರ್ಪಕವಾಗಿ ಬಳಸುತ್ತಿದ್ದಾರೆ.
2. ಕಾರ್ಡ್‌ಗಳು:– ಮೂರೂ ತರಗತಿಯ ಕಾರ್ಡ್‌ಗಳನ್ನು ವಿಷಯವಾರು ವಿದ್ಯಾರ್ಥಿಗಳಿಗೆ ಎಟಕುವ ರೀತಿಯಲ್ಲಿ ಜೋಡಿಸಲಾಗಿದ್ದು ಪ್ರಗತಿನೋಟಕ್ಕೆ ಅನುಗುಣವಾಗಿ ಕಾರ್ಡ್‌ಗಳನ್ನು ಬಳಸುತ್ತಿದ್ದಾರೆ.
3. ಕಲಿಕಾಸಾಮಗ್ರಿಗಳು:– ಮಕ್ಕಳು ಬಳಸಲು ಸಹಕಾರಿಯಾಗುವಂತೆ ಕಲಿಕೋಪಕರಣಗಳಾದ, ಬೀಜಗಳು, ಮಣಿಗಳು, ಕಡ್ಡಿಗಳು, ಡೈಸ್‌ಗಳು, ಜ್ಯಾಮಿತೀಯ ಆಕೃತಿಗಳು, ಪಪೆಟ್, ಸ್ಕ್ರೀನ್ ವ್ಯವಸ್ಥಿತವಾಗಿ ಜೋಡಿಸಿದ್ದು ಕಲಿಕಾಸಾಮಗ್ರಿಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸುತ್ತಿದ್ದಾರೆ.

4. ಗುಂಪುತಟ್ಟೆಗಳು:– ತರಗತಿಯಲ್ಲಿ ಗುಂಪುತಟ್ಟೆಗಳನ್ನು ಹಾಕಲು ಬಣ್ಣದಿಂದ ಸ್ಥಳವನ್ನು ಗುರುತಿಸಲಾಗಿದೆ. ಚಟುವಟಿಕೆಗಳಿಗೆ ಅನುಗುಣವಾಗಿ ಸೂಕ್ತವಾದ ಗುಂಪುತಟ್ಟೆಯನ್ನು ಬಳಸುತ್ತಿದ್ದಾರೆ.

5. ಪ್ರಗತಿನೋಟ:– ಮಕ್ಕಳ ಕೈಗೆಟಕುವಂತೆ ತರಗತಿವಾರು ಪ್ರಗತಿನೋಟಗಳನ್ನು ಪ್ರದರ್ಶಿಸಲಾಗಿದ್ದು ಮಕ್ಕಳೇ ಸ್ವತಃ ಗುರುತಿಸುತ್ತಿದ್ದಾರೆ.

6. ಹವಾಮಾನನಕ್ಷೆ:– ಸಾಮೂಹಿಕ ಹಾಗೂ ಅಭ್ಯಾಸಪುಸ್ತಕದಲ್ಲಿನ ಹವಾಮಾನ ನಕ್ಷೆಯನ್ನು ನಿರ್ವಹಿಸುತ್ತಿದ್ದಾರೆ ಹಾಗೂ ತಿಂಗಳಿಗೊಮ್ಮೆ ಕ್ರೋಢೀಕರಿಸಿ ವಿಶ್ಲೇಷಿಸಲಾಗಿದೆ.

7. ಕಲಿಕಾಚಪ್ಪರ:– ವಿದ್ಯಾರ್ಥಿಗಳು ಸಿದ್ಧಪಡಿಸಿದ ಕ್ರಾಫ್ಟ್ ಚಟುವಟಿಕೆಗಳನ್ನು ಕಲಿಕಾಚಪ್ಪರದಲ್ಲಿ ಪ್ರದರ್ಶನಗೊಳಿಸಲಾಗಿದೆ.

8. ಅಭ್ಯಾಸಪುಸ್ತಕಗಳು:– ಪ್ರಗತಿನೋಟದಲ್ಲಿನ ದಾಖಲೆಗಳಿಗೆ ಅನುಗುಣವಾಗಿ ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಶಿಕ್ಷಕರು ತಿದ್ದಿ ದಿನಾಂಕ ನಮೂದಿಸಿ ಸಹಿ ಮಾಡುತ್ತಿದ್ದಾರೆ.

9. ಎಲ್ಲಾ ಮಕ್ಕಳಿಗೂ ಸೂಕ್ತ ಸ್ಥಳಾವಕಾಶ:– ತರಗತಿ ಒಳಗೆ ಗುಂಪುಗಳ ನಿರ್ವಹಣೆಗೆ ಸ್ಥಳವನ್ನು ನಿಗದಿಪಡಿಸಲಾಗಿದೆ. ಮಕ್ಕಳು ತಮ್ಮ ತಮ್ಮ ಗುಂಪುಗಳಲ್ಲಿ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದಾರೆ.

10. ಶಿಕ್ಷಕರ ದಿನಚರಿ:– ಪ್ರತಿದಿನ ನಿರ್ವಹಿಸಿದ ಚಟುವಟಿಕೆಗಳನ್ನು ಭರ್ತಿ ಮಾಡುತ್ತಿದ್ದು ದಿನಚರಿ ಹಾಗೂ ಪ್ರಗತಿನೋಟದ ದಾಖಲೆಗಳು ತಾಳೆ ಇರುತ್ತವೆ.

11. ನಲಿಕಲಿ ತರಬೇತಿ ಪಡೆದ ಶಿಕ್ಷಕರು:– ತರಗತಿ ನಿರ್ವಹಿಸುತ್ತಿರುವ ಶಿಕ್ಷಕರು ನಲಿಕಲಿ ತರಬೇತಿ ಪಡೆದಿದ್ದು ಸಂಪೂರ್ಣ ಸಹಾಯದ ಗುಂಪಿನನಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಇತರೇ ಗುಂಪಿನ ವಿದ್ಯಾರ್ಥಿಗಳಿಗೆ ಗಮನ ನೀಡುತ್ತಿದ್ದು ತರಗತಿಯನ್ನು ನಲಿಕಲಿ ವಿಧಾನದಲ್ಲಿಯೇ ನಿರ್ವಹಿಸುತ್ತಿದ್ದಾರೆ. ಶ್ರೀ.ವಿಜಯಕುಮಾರ್.ಜಿ. ಶ್ರೀಮತಿ.ವಿನುತ.ಕೆ.ಎಲ್. ಶ್ರೀಮತಿ.ಸುವರ್ಣ.ಬಿ.

12. ನಲಿಕಲಿ ತರಬೇತಿ ಹೊಂದಿರುವ ಮುಖ್ಯಶಿಕ್ಷಕರು:– ಶಿಕ್ಷಕರ ಅನುಪಸ್ಥಿತಿಯಲ್ಲಿ ನಲಿಕಲಿ ತರಗತಿ ನಿರ್ವಹಿಸಲು ಪರ್ಯಾಯವ್ಯವಸ್ಥೆ ಮಾಡಲಾಗಿದೆ.

13. ನಲಿಕಲಿ ತರಗತಿಗಳನ್ನು ಸಮರ್ಥವಾಗಿ ಬೆಂಬಲಿಸಲು ಸಿಆರ್‌ಪಿ ತಿಂಗಳಿಗೊಮ್ಮೆ ಭೇಟಿ ನೀಡುತ್ತಿದ್ದಾರೆ. ಹಾಗೂ ಬಿಆರ್‌ಪಿ, ಶಿಕ್ಷಣಸಂಯೋಜಕರು, ಬಿಆರ್‌ಸಿ ಮತ್ತು ಬಿಇಓ ಭೇಟಿ ನೀಡಿದ ಸಂದರ್ಭದಲ್ಲಿ ನಲಿಕಲಿ ತರಗತಿಗಳ ವೀಕ್ಷಣೆ ಮಾಡಿದ್ದು ಸಲಹೆ, ಮಾರ್ಗದರ್ಶನ ನೀಡಿರುತ್ತಾರೆ.

### ಮೈಕ್ರೋ ಅಧ್ಯಯನ:–

ನಮ್ಮ ಶಾಲೆಗೆ ದಿನಾಂಕ:05.02.2019 ರಂದು ಶ್ರೀ.ಹೆಚ್.ಎಸ್.ಲಕ್ಷ್ಮೀಕಾಂತ್, ಬಿಆರ್‌ಪಿ, ಭದ್ರಾವತಿ ಇವರು ಭೇಟಿ ನೀಡಿ ನಲಿಕಲಿ ಘಟಕಗಳನ್ನು ಸಮಗ್ರ ಮೈಕ್ರೋ ಅಧ್ಯಯನಕ್ಕೆ ವಿಷಯವಾರು ಕನ್ನಡ, ಗಣಿತ, ಹಾಗೂ ಪರಿಸರ ಅಧ್ಯಯನಗಳಿಗೆ ಸಂಬಂಧಿಸಿದಂತೆ ಪ್ರತಿ ವಿಷಯಗಳನ್ನು ವೀಕ್ಷಣೆ ಮಾಡಿ ಮಕ್ಕಳು ಹಾಗೂ ಶಿಕ್ಷಕರ ಕಲಿಕಾ ವಿಧಾನವನ್ನು ಪರಿಶೀಲಿಸಿ ಎಲ್ಲಾ ವಿಷಯಹಗಳಲ್ಲೂ ಮಕ್ಕಳ ಕಲಿಕಾ ಪ್ರಗತಿಯು 'ಎ+' ಶ್ರೇಣಿಯಲ್ಲಿರುವ ಬಗ್ಗೆ ವರದಿ ನೀಡಿರುತ್ತಾರೆ.

### ನಲಿಕಲಿ ಘಟಕಗಳು:–

ನಮ್ಮ ಶಾಲೆಯಲ್ಲಿ 2019–20 ನೇ ಸಾಲಿನಲ್ಲಿ ಘಟಕ–1 ರಲ್ಲಿ 1 ನೇ ತರಗತಿಯ 10 ಮಕ್ಕಳು, 2 ನೇ ತರಗತಿಯ 06 ಮಕ್ಕಳು ಮತ್ತು 3 ನೇ ತರಗತಿಯ 8 ಮಕ್ಕಳು ಹಾಗೂ ಘಟಕ–2 ರಲ್ಲಿ 1 ನೇ ತರಗತಿಯ 11 ಮಕ್ಕಳು, 2 ನೇ ತರಗತಿಯ 06 ಮಕ್ಕಳು ಮತ್ತು 3 ನೇ ತರಗತಿಯ 8 ಮಕ್ಕಳು ಒಟ್ಟು 1–3ನೇ ತರಗತಿಯಲ್ಲಿ 49 ಮಕ್ಕಳು ಚಟುವಟಿಕೆ ಆಧಾರಿತ ನಲಿಕಲಿ ಶಿಕ್ಷಣ ಪಡೆಯುತ್ತಿದ್ದಾರೆ.

### ಶಾಲಾ ಭೌತಿಕ ಸೌಲಭ್ಯಗಳು:–

* 8 ಶಾಲಾ ಕೊಠಡಿಗಳ ವ್ಯವಸ್ಥೆ
* ಉತ್ತಮವಾದ ಗೋಡೆಬರಹ
* ಶಾಲಾಕಾಂಪೌಂಡ್
* ಉತ್ತಮ ಕುಡಿಯುವ ನೀರಿನ ವ್ಯವಸ್ಥೆ

* ಗಂಡು ಮತ್ತು ಹೆಣ್ಣು ಮಕ್ಕಳ ಪ್ರತ್ಯೇಕ ಶೌಚಾಲಯ ವ್ಯವಸ್ಥೆ
* ದಾಸೋಹ ಕೊಠಡಿ
* ವಿದ್ಯುತ್ ಸೌಲಭ್ಯ
* ರ್‍ಯಾಂಪ್ಸ್ ವ್ಯವಸ್ಥೆ
* ಗಣಕ & ಜೆರಾಕ್ಸ್ ಯಂತ್ರ
* ಸಿಡಬ್ಲ್ಯುಎಸ್‌ಎನ್ ಮಕ್ಕಳಿಗೆ ಕಿಟ್ ರೀತಿಯ ಸೌಲಭ್ಯಗಳು ಲಭ್ಯವಿದೆ.

ಶಿಕ್ಷಕರ ಮಾಹಿತಿ:–'ಶಾಲೆಯಲ್ಲಿದ್ದರೆ ಗುರು ಜ್ಞಾನದ ಪಾಠ ಶುರು' ಎಂಬ ಉಕ್ತಿಯಂತೆ ನಮ್ಮ ಶಾಲೆಯಲ್ಲಿ 6 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶಾಲಾ ಎಸ್.ಡಿ.ಎಂ.ಸಿ.:–

ನಮ್ಮ ಶಾಲೆಯು ಉತ್ತಮ ಎಸ್.ಡಿ.ಎಂ.ಸಿ.ಯನ್ನು ಹೊಂದಿದ್ದು, ಪ್ರತೀ ರಾಷ್ಟ್ರೀಯ ಹಬ್ಬಗಳಲ್ಲಿ ಸದಸ್ಯರು ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ವಿಶಇಂಷಂ ಭೋಜನದ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ಶಾಲೆಗೆ ಅಗತ್ಯ ತಟ್ಟೆಗಳು, ನೋಟ್‌ಪುಸ್ತಕ, ಲೋಟಗಳು, ಪೆನ್‌ಗಳು, ಷಾಮಿಯನ ವ್ಯವಸ್ಥೆ, ಶಾಲೆಯು ಆಕರ್ಷಣೀಯವಾಗಿ ಕಾಣಲು ಗೋಡೆ ಬರಹಕ್ಕೆ ಅಗತ್ಯ ನೆರವು ನೀಡಿರುತ್ತಾರೆ. ಪಂಚಾಯಿತಿ ಸದಸ್ಯರುಗಳು ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿಗೆ 2018–19 ನೇ ಸಾಲಿನಲ್ಲಿ 5000 ರೂಗಳನ್ನು ನೀಡುವುದರ ಜೊತೆಗೆ ಕಾರ್ಯಕ್ರಮದ ವೇದಿಕೆ ನಿರ್ಮಾಣಕ್ಕೆ ಸಹಾಯ ಧನವನ್ನು ನೀಡಿರುತ್ತಾರೆ. ಅಷಇಔಂ ಅಲ್ಲದೆ ತಾಲ್ಲೂಕುಪಂಚಾಯಿತಿ ಸದಸ್ಯರಾದ ಶ್ರೀಮತಿ. ಗೀತಾ ಅಜಯ್ ಕುಮಾರ್‌ರವರು ಶಾಲೆಗೆ ಸುಣ್ಣಬಣ್ಣದ ಸಲುವಾಗಿ ಸುಮಾರು ಒಂದುಲಕ್ಷರೂಗಳ ಅನುದಾನವನ್ನು ನೀಡಿರುತ್ತಾರೆ.

ಶಾಲಾ ಕಾರ್ಯಕ್ರಮಗಳು:–

ಪ್ರಸ್ತುತ ಶಾಲೆಯಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಹೊರತುಪಡಿಸಿ ದಾಖಲಾತಿ ಆಂದೋಲನ, ಪರಿಸರ ದಿನಾಚರಣೆ, ವಿಶ್ವಜನಸಂಖ್ಯಾ ದಿನಾಚರಣೆ, ವಿಜ್ಞಾನ ದಿನಾಚರಣೆ, ಗಣಿತ ದಿನಾಚರಣೆ, ಕುವೆಂಪು ದಿನಾಚರಣೆ, ವಿಶ್ವಯುವಕರ ದಿನಾಚರಣೆ, ವಿಶ್ವಶಾಂತಿ ದಿನಾಚರಣೆ, ವಿಶ್ವಯೋಗ ದಿನಾಚರಣೆ, ನೋಬ್ಯಾಗ್‌ಡೇ, ಇಂಗಿಜಂಷು ಫೆಸ್ಟ್ ಹಾಗೂ ಸಮುದಾಯದತ್ತ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ನಲಿಕಲಿ ಘಟಕಗಳ ಮಕ್ಕಳ ಕಲಿಕಾಸಾಧನೆ:–

ನಮ್ಮ ಶಾಲೆಯ ಘಟಕ 1 ಮತ್ತು 2 ರಲ್ಲಿ ಮಕ್ಕಳ ಕಲಿಕಾ ಸಾಧನೆ ಉತ್ತಮವಾಗಿದ್ದು ಶಾಲೆಗೆ ಭೇಟಿ ನೀಡಿದ ಇಲಾಖಾ ಅಧಿಕಾರಿಗಳಾದ ಸಿಆರ್‌ಪಿ, ಬಿಆರ್‌ಪಿ ಗಳೂ ಸಹ ಕಲಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ನಲಿಕಲಿ ಬೋಧನಾ ಶಿಕ್ಷಕರ ನಾವೀನ್ಯತೆ:–

ನಲಿಕಲಿ ಬೋಧನೆಗೆ ವಿಷಯವಾರು ಮೂರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು ಕಲಿಕೆಗೆ ಅಗತ್ಯವಾದ ಕಲಿಕಾ ಚಪ್ಪರ, ಪೆಪೆಟ್ ಷಇಂಂ, ಪ್ರಗತಿ ನೋಟ, ಹವಾಮಾನ ನಕ್ಷೆ ಹಾಗೂ ಕಲಿಕೆಗೆ ಪೂರಕವಾದ ಉತ್ತಮ ಕಲಿಕಾ ಸಾಮಗ್ರಿಗಳನ್ನು ಬಳಸಿ ಮಕ್ಕಳಿಗೆ ಸಂತಸದಾಯಕ, ಭಯರಹಿತ ಕಲಿಕೆಗೆ ಪ್ರೋತ್ಸಾಹಿಸುವುದರ ಜೊತೆಗೆ ಗುಣಾತ್ಮಕ ಶಿಕ್ಷಣಕ್ಕೆ ಉತ್ತೇಜನ ನೀಡಲಾಗುತ್ತಿದೆ.




















